ಸಿ.ಸಿ.1617/2023 ಪಿಡಬ್ಲ್ಯೂ-1

ದಿನಾಂಕಃ 15.10.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಎಂ.ಪಿ. ವಕೀಲರಿಂದಃ**

ನಾನು ಆರೋಪಿಗೆ ನೋಟೀಸನ್ನು ಜಾರಿ ಮಾಡಿಸಿರುತ್ತೇನೆ. ನಾನು ಪಿರ್ಯಾದನ್ನು ದಾಖಲು ಮಾಡುವ ಪೂರ್ವದಲ್ಲಿ ಅಥವಾ ನೋಟೀಸನ್ನು ಜಾರಿ ಮಾಡುವ ಪೂರ್ವದಲ್ಲಿ ನನ್ನ ಉದ್ಯೋಗದ ಬಗ್ಗೆ ನಮೂದು ಮಾಡಿರುವುದಿಲ್ಲ. ನಾನು ನನ್ನ ಉದ್ಯೋಗದ ಬಾಬ್ತು ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಾನು ನಿಪಿ-3 ರಲ್ಲಾಗಲಿ, ಪಿರ್ಯಾದಲ್ಲಾಗಲೀಲ ನಾನು ಸಾಲವಾಗಿ ನೀಡಿದ ಹಣದ ಮರುಪಾವತಿಗಾಗಿ ನಿಪಿ-1 ನ್ನು ಸ್ವೀಕರಿಸಿಕೊಂಡಿರುವ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ವ್ಯವಹಾರದ ಬಾಬ್ತು ಆರೋಪಿಯು ದಿ.20.07.2023 ರಂದು ನನ್ನನ್ನು ಮೊದಲನೇ ಬಾರಿಗೆ ಭೇಟಿ ಮಾಡಿರುತ್ತಾರೆ. ನಾನು ಆರೋಪಿಗೆ ಹಣವನ್ನು ದಿ.22.07.2023 ರಂದು ನೀಡಿರುತ್ತೇನೆ. ದಿ.20.07.2023 ರಂದು ಆರೋಪಿಯಿಂದ ನಾನು ಯಾವುದೇ ಚೆಕ್ ನ್ನು ಪಡೆದುಕೊಂಡಿರುವುದಿಲ್ಲ. ದಿ.22.07.2023 ರಂದು ನನ್ನ ಮತ್ತು ಆರೋಪಿಯ ನಡುವೆ ಹಣದ ವ್ಯವಹಾರದ ಕುರಿತು ಯಾವುದೇ ಬರವಣಿಗೆ ಆಗಿರುವುದಿಲ್ಲ. ಆರೋಪಿಯು ಮೋದಿ ಕೇರ್ ಎಂಬ ಅಂಗಡಿಯನ್ನು ನಡೆಸುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ಅಂಗಡಿಯ ಬಾಬ್ತು ನಾನು ಆರೋಪಿಯೊಂದಿಗೆ ಯಾವುದೇ ಹಣ ವ್ಯವಹಾರ ಮಾಡಿರುವುದಿಲ್ಲ.

ಅದೇ ರೀತಿ ಮೋದಿ ಕೇರ್ ಎಂಬ ಅಂಗಡಿಯೊಂದಿಗೆ ವ್ಯವಹಾರ ಮಾಡಿರುವ ಬಾಬ್ತು ನನ್ನ ಖಾತೆಯಲ್ಲಿ ಯಾವುದೇ ನಮೂದು ಇರುವುದಿಲ್ಲ. ನನ್ನ ಮತ್ತು ಮೋದಿ ಕೇರ್ ಅಂಗಡಿಯ ನಡುವೆ ಆಗಿರುವ ವ್ಯವಹಾರವನ್ನು ಒಪ್ಪಿಕೊಂಡಲ್ಲಿ ನನಗೆ ತೊಂದರೆಯಾಗುತ್ತದೆ ಎಂಬ ಕಾರಣದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸಾಕ್ಷಿಗೆ ಸದರಿ ದಾಖಲಾತಿಯು ಗೋಣೀಬೀಡು ಶಾಖೆಯ ತಮ್ಮ ಖಾತೆಗೆ ಸಂಬಂಧಪಟ್ಟಿರುತ್ತದೆ ಎಂದು ಒಪ್ಪಿಕೊಂಡ ಮೇರೆಗೆ ಸದರಿ ದಾಖಲಾತಿಯನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿ ಮೋದಿ ಕೇರ್ ಅಂಗಡಿಯೊಂದಿಗೆ ಆಗಿರುವ ವ್ಯವಹಾರದ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿಯಲ್ಲ. ಸದರಿ ದಾಖಲಾತಿಯಲ್ಲಿ VMCCS ನ ಗೋಲ್ಡ್ ಸಂಸ್ಥೆಯ ಜಿ-20 ಸ್ಕೀಮ್ ನ ಬಾಬ್ತು ಆಗಿರುವ ವ್ಯವಾಹಾರದ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿಯಲ್ಲ. ಸದರಿ ವ್ಯವಹಾರವನ್ನು ನಾನು ಒಪ್ಪಿಕೊಂಡಲ್ಲಿ ನನಗೆ ತೊಂದರೆಯಾಗುತ್ತದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ವಾಟ್ಸ್ ಆಪ್ ಖಾತೆಯ ಮುಖಾಂತರ ಜಿ-20 ಸ್ಕೀಮ್ ನ ಕುರಿತು ಚರ್ಚಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಚರ್ಚೆಯು ಒಳಗೊಂಡಿರುವಂತಹ ಮೊಬೈಲ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ಗೋಣೀಬೀಡು ಶಾಖೆಯ ಕರ್ನಾಟಕ ಬ್ಯಾಂಕ್ ನ ಪಾಸ್ ಬುಕ್ ನ್ನು ಎಷ್ಟು ಬಾರಿ ಅಪ್ ಡೇಟ್ ಮಾಡಿಸಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ಪಾಸ್ ಬುಕ್ ನನ್ನ ಬಳಿ ಇರುವ

ಬಗ್ಗೆ ಪರಿಶೀಲಿಸಿ ನೋಡಬೇಕು. ಸದರಿ ಪಾಸ್ ಬುಕ್ ನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಾನು 2023 ನೇ ಸಾಲಿನಲ್ಲಿ ಆರೋಪಿಯನ್ನು ಮೊದಲನೇ ಬಾರಿಗೆ ಭೇಟಿ ಮಾಡುವ ಸಮಯದಲ್ಲಿ ನನ್ನೊಟ್ಟಿಗೆ ಇತರರು ಯಾರು ಇರುವುದಿಲ್ಲ. ಅದೇ ರೀತಿ ದಿ.22.07.2023 ರಂದು ಸಹಾ ನನ್ನ ಜೊತೆ ಯಾರು ಇರುವುದಿಲ್ಲ. ದಿ.22.07.2023 ರಂದು ನನ್ನ ಮತ್ತು ಆರೋಪಿಯ ನಡುವೆ ನಮ್ಮ ಮನೆಯಲ್ಲಿ ವ್ಯವಹಾರವನ್ನು ಮಾಡಲಾಗಿರುತ್ತದೆ. ದಿ.20.07.2023 ರಂದು ಆರೋಪಿಯು ನನ್ನನ್ನು ಭೇಟಿ ಮಾಡಿರುವುದಿಲ್ಲ ಹಾಗೂ ದಿ.22.07.2023 ರಂದು ನನ್ನ ಮತ್ತು ಆರೋಪಿಯ ನಡುವೆ ಯಾವುದೇ ವ್ಯವಹಾರದ ಮಾತುಕತೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಮನೆ ಕಟ್ಟುವ ಬಾಬ್ತು ನನ್ನ ಬಳಿ ಯಾವುದೇ ಸಾಲವನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನನಗೆ ಆರೋಪಿಗೆ ರೂ.7,50,000/- ಸಾಲವನ್ನು ನೀಡಲು ಯಾವುದೇ ಆರ್ಥಿಕ ಚೈತನ್ಯ ಇರುವುದಿಲ್ಲ ಎಂದರೆ ಸರಿಯಲ್ಲ.

ಜಿ-20 ಸ್ಕೀಮ್ ನ ಅಡಿಯಲ್ಲಿ ಪಡೆದುಕೊಂಡ ಚೆಕ್ ನ್ನು ದುರುಪಯೋಗ ಪಡಿಸಿಕೊಂಡು ಪ್ರಸ್ತುತ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಚೆಕ್ ನ್ನು ಕೇವಲ ಭದ್ರತೆಗಾಗಿ ನೀಡಲಾಗಿದ್ದು ಮತ್ತು ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ನ್ನು ಬ್ಯಾಂಕ್ ಗೆ ಹಾಜರುಪಡಿಸುವ ಅಧಿಕಾರವನ್ನು ನಾನು ಹೊಂದಿರಲಿಲ್ಲ ಎಂದರೆ ಸರಿಯಲ್ಲ. ಭದ್ರತೆಗಾಗಿ ನೀಡಿದ ಚೆಕ್ ನ್ನು ನಾನು ದುರುಪಯೋಗಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಚೆಕ್ ನ್ನು ಬ್ಯಾಂಕ್ ಗೆ ಹಾಜರುಪಡಿಸುವ ಪೂರ್ವದಲ್ಲಿ ಆರೋಪಿಯ ಗಮನಕ್ಕೆ ನಾನು ತಂದಿರುತ್ತೇನೆ ಆದರೆ ದಿನಾಂಕ ನೆನಪಿರುವುದಿಲ್ಲ. ನಾನು ಆರೋಪಿಗೆ ಯಾವುದೇ ಬರವಣಿಗೆ ಮುಖಾಂತರ ತಿಳಿಸಿರುವುದಿಲ್ಲ. ನಾನು ಚೆಕ್ ನ್ನು ಬ್ಯಾಂಕ್ ಗೆ ಹಾಜರುಪಡಿಸಿವ ಪೂರ್ವದಲ್ಲಿ ಆರೋಪಿಗೆ ಯಾವುದೇ ಮಾಹಿತಿಯನ್ನು ನೀಡದಿದ್ದರೂ ಸಹಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ನಮೂದು ಮಾಡಲಾಗಿರುವ ಹಣವು ನನ್ನ ಖಾತೆಗೆ ಜಮಾ ಆಗಿರುವ ಕುರಿತು ನನಗೆ ಯಾವುದೇ ಮಾಹಿತಿ ಬಂದಿರುವುದಿಲ್ಲ. ಆದರೆ ಆ ರೀತಿಯಾದ ಮಾಹಿತಿಯು ದಿ.28.08.2023 ರಂದು ನನ್ನ ಗಮನಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ.

ಆ ರೀತಿಯಾಗಿ ನನಗೆ ಮಾಹಿತಿ ಇದ್ದರೂ ಸಹಾ ಲಾಭವನ್ನು ಪಡೆಯುವ ದುರುದ್ದೇಶದಿಂದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಭದ್ರತೆಗಾಗಿ ನೀಡಿದ ಚೆಕ್ ನ್ನು ಹಾಜರುಪಡಿಸಿ, ಸುಳ್ಳು ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ನನಗೆ ಯಾವುದೇ ಹಣವನ್ನು ಮರು ಪಾವತಿಸಬೇಕಾಗಿಲ್ಲ ಎಂದರೆ ಸರಿಯಲ್ಲ.

ಸಿ.ಸಿ.1617/2023 ಪಿಡಬ್ಲ್ಯೂ-1

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.